# ಗೋವಾದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ಆತ್ಮಶ್ರದ್ಧಾನಂದ

ಸಂಗ್ರಹಾನುವಾದ : ಶಂಸ ಐತಾಳ

**ಸ್ವಾ**ಮಿ ವಿವೇಕಾನಂದರು ಪ್ರವಾಸಪ್ರಿಯರು. ತಮ್ಮ ಕೇವಲ ೩೯ ವರ್ಷಗಳ ಜೀವಿತಾವಧಿಯಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭಾರತದ ಅನೇಕ ಸ್ಥಳಗಳಿಗೆ ಅವರು ಭೇಟಿ ನೀಡಿದ್ದರು. ಅನುಕೂಲಕರವಾದ ಸಾರಿಗೆ ಸೌಲಭ್ಯಗಳು ಸಾಕಷ್ಟು ಇಲ್ಲದ ಆ ದಿನಗಳಲ್ಲಿಯೂ ಅವರು ಪಶ್ಚಿಮ ಬಂಗಾಳ, ಇಂದಿನ ಬಾಂಗ್ಲಾದೇಶ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮುಂತಾದ ಸ್ಥಳಗಳಿಗೆ ಪ್ರವಾಸ ಮಾಡಿರುವುದು ಅವರ ಪ್ರವಾಸಪ್ರಿಯತೆಗೆ ಸಾಕ್ಷಿಯಾಗಿದೆ. ಅವರು ಸಂದರ್ಶಿಸಿದ ಹಲವು ಸ್ಥಳಗಳಲ್ಲಿ ಅವರ ಸ್ಮಾರಕಗಳು ನಿರ್ಮಿತವಾಗಿವೆ; ಅವರ ಮೂರ್ತಿಗಳು ಸ್ಥಾಪಿತವಾಗಿವೆ. ಅವರು ಮೊಕ್ಕಾಂ ಮಾಡಿದ ಅನೇಕ ಕಟ್ಟಡಗಳು ವಸ್ತುಸಂಗ್ರಹಾಲಯಗಳಾಗಿವೆ. ಆ ಪ್ರದೇಶಗಳ ಜನರು ಇಂದಿಗೂ 'ಸ್ವಾಮೀಜಿ ಇಲ್ಲಿಗೆ ಬಂದಿದ್ದರು' ಎಂದು ಅವರನ್ನು ಗೌರವದಿಂದ ನೆನಪಿಸಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಅವರು ಕಾಲ್ನಡಿಗೆಯಲ್ಲಿಯೇ ಪ್ರವಾಸ ಮಾಡುತ್ತಿದ್ದರು. ವಿವಿಧ ವರ್ಗಗಳಿಗೆ ಸೇರಿದ ಜನರ ಮನಸ್ಸನ್ನು ಅರಿತುಕೊಳ್ಳುವುದು, ತಮ್ಮ ಪ್ರೀತಿಯ ತಾಯ್ನಾಡಿನ ನಿಸರ್ಗ ಸೌಂದರ್ಯವನ್ನು ಆಹ್ಲಾದಿಸುವುದು ಅವರ ಪ್ರವಾಸದ ಉದ್ದೇಶವಾಗಿರುತ್ತಿದ್ದವು. ಸಂತರು–ಪಾಪಿಗಳು, ಪಂಡಿತರು–ಪಾಮರರು, ಶ್ರೀಮಂತರು–ಬಡವರು, ಮೇಲ್ಜಾತಿಯವರು–ಕೀಳ್ಜಾತಿಯವರು ಎಂಬ ಭೇದಭಾವನೆಯಿಲ್ಲದೆ ಅವರು ಎಲ್ಲರೊಂದಿಗೆ ಬೆರೆತು ಅವರ ಸುಖದುಃಖಗಳನ್ನು ಆಲಿಸುತ್ತಿದ್ದರು. **'ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ। ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥'** – ವಿದ್ಯೆ, ವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ, ಮತ್ತು ನಾಯಿಯ ಮಾಂಸವನ್ನು ತಿನ್ನುವವನು– ಇವರೆಲ್ಲರಲ್ಲಿ ಜ್ಞಾನಿಗಳು ಸಮದರ್ಶಿಗಳಾಗಿರುವರು – ಎಂಬ ಗೀತಾವಾಕ್ಯಕ್ಕೆ ಸ್ವಾಮೀಜಿ ಸಾಕ್ಷೀಭೂತರಾಗಿದ್ದರು. ತಾವು ಹೋದೆಡೆಯಲ್ಲೆಲ್ಲ ಅವರು ಆಧ್ಯಾತ್ಮಿಕ ಮತ್ತು ರಾಷ್ಟ್ರೀಯ ಪುನರುಜ್ಜೀವನದ ಬೀಜಾವಾಪನೆ ಮಾಡುತ್ತಿದ್ದರು. ಅಲ್ಲಿ ಅವರು ಮಾಡಿದ ಉಪನ್ಯಾಸಗಳು ಇಂದಿಗೂ ಯುವಜನರಿಗೆ ಸ್ಫೂರ್ತಿಯ ಸೆಲೆಯಾಗಿರುವುದರಲ್ಲೇನೂ ಆಶ್ಚರ್ಯವಿಲ್ಲ. ಆ ಸ್ಥಳಗಳಲ್ಲಿ ವಿವೇಕಾನಂದರ ದಿವ್ಯಪ್ರಭಾವವು ಇಂದಿಗೂ ಮಸುಕಾಗಿಲ್ಲ.

ಪೂಜ್ಯ ಸ್ವಾಮೀಜಿಯವರು ಚೆನ್ನೈ ಶ್ರೀರಾಮಕೃಷ್ಣ ಮಠದಿಂದ ಪ್ರಕಟವಾಗುತ್ತಿರುವ ರಾಮಕೃಷ್ಣ ಮಹಾಸಂಘದ ಆಂಗ್ಲ ಪತ್ರಿಕೆ 'ವೇದಾಂತ ಕೇಸರಿ'ಯ ಸಂಪಾದಕರು. ಇವರು ಉತ್ತಮ ಲೇಖಕರು ಮತ್ತು ವಾಗ್ಮಿಗಳು. ಮೂಲ ಆಂಗ್ಲ ಲೇಖನದ ಸಂಗ್ರಹಾನುವಾದ, ಕನ್ನಡದ ಹಿರಿಯ ಲೇಖಕರಾದ ಶಂಸ ಐತಾಳರಿಂದ.

ಸ್ವಾಮಿ ವಿವೇಕಾನಂದರ ಗೋವಾ ಪ್ರವಾಸವು ಚಾರಿತ್ರಿಕ ಮಹತ್ವವನ್ನು ಹೊಂದಿದೆ. ೧೮೯೨ ನೆಯ ಅಕ್ಟೋಬರ್ ೧೫ ರಂದು ಕರ್ನಾಟಕದ ಬೆಳಗಾವಿಗೆ ಆಗಮಿಸಿದ ಅವರು, ಸದಾಶಿವ ರಾವ್ ಭಾಟೆ ಮತ್ತು ಹರಿಪದ ಮಿತ್ರ ಅವರ ಮನೆಗಳಲ್ಲಿ ಒಟ್ಟು ೧೫ ದಿನಗಳ ಕಾಲ ತಂಗಿದ್ದರು. ಅನಂತರ ಅದೇ ತಿಂಗಳ ೨೭ ರಂದು ಅವರು ಗೋವಾಕ್ಕೆ ಹೊರಟರು. ಆಗ ಗೋವಾ ಪೋರ್ಚುಗೀಸರ ಆಡಳಿತದಲ್ಲಿತ್ತು. ಸ್ವಾಮೀಜಿಯವರ ಗೋವಾದ ಪ್ರವಾಸದ ವಿವರಗಳನ್ನು ನಿರೂಪಿಸುವ ಮೊದಲು ಅಲ್ಲಿನ ಪ್ರಾಚೀನ ಚರಿತ್ರೆ, ಭೌಗೋಳಿಕ ಸನ್ನಿವೇಶ, ಸಂಸ್ಕೃತಿ ಮತ್ತಿತರ ಸಂಬಂಧಿತ ವಿವರಗಳನ್ನು ಸಂಕ್ಷಿಪ್ತವಾಗಿ ತಿಳಿಯುವುದು ಉಪಯುಕ್ತ.

ವಿಸ್ತೀರ್ಣದ ದೃಷ್ಟಿಯಿಂದ ಭಾರತದ ಅತ್ಯಂತ ಚಿಕ್ಕ ರಾಜ್ಯವಾಗಿರುವ ಗೋವಾ, ಜನಸಂಖ್ಯೆಯ ದೃಷ್ಟಿಯಿಂದ ನಾಲ್ಕನೆಯ ಅತಿ ಚಿಕ್ಕ ರಾಜ್ಯವೆನಿಸಿದೆ. ಕೊಂಕಣ ಕರಾವಳಿಯ ತೀರದಲ್ಲಿರುವ ಗೋವಾಕ್ಕೆ ಆ ಹೆಸರು ಬಂದಿರುವುದು ಪೋರ್ಚುಗೀಸರಿಂದ ಎನ್ನಲಾಗಿದೆ. ಆದರೆ 'ಮಹಾಭಾರತ'ದಲ್ಲಿ ಈಗಿನ ಗೋವಾ ಪ್ರದೇಶವು 'ಗೋಪರಾಷ್ಟ್ರ' ಅಥವಾ 'ಗೋವರಾಷ್ಟ್ರ' ಎಂದು ಉಲ್ಲೇಖಿತವಾಗಿದೆ. 'ಹರಿವಂಶ' ಮತ್ತು 'ಸ್ಕಂದಪುರಾಣ' ಗಳಂತಹ ಕೆಲವು ಪುರಾತನ ಸಂಸ್ಕೃತ ಕೃತಿಗಳಲ್ಲಿ 'ಗೋಪಕಾಪುರಿ', 'ಗೋಮಾಂಚಲ' ಹಾಗೂ 'ಗೋಪಕ ಪಟ್ಟಣ' ಎಂಬ ಉಲ್ಲೇಖಗಳೂ ಕಾಣಸಿಗುತ್ತವೆ.

ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಗೋವಾ ಮೌರ್ಯರ ಆಡಳಿತದಲ್ಲಿತ್ತು. ಅನಂತರ, ಸುಮಾರು ೩,೦೦೦ ವರ್ಷಗಳ ಹಿಂದೆ ಕೊಲ್ಹಾಪುರದ ಶಾತವಾಹನರು ಗೋವಾದ ಆಡಳಿತ ನಡೆಸಿದರು. ಮುಂದೆ ಚಾಲುಕ್ಯರ ಅಧೀನದಲ್ಲಿದ್ದ ಗೋವಾವನ್ನು ಆಮೇಲೆ ಕೆಲವು ಶತಮಾನಗಳ ಕಾಲ, ಸಿಲ್ಹರರೂ, ಕದಂಬರೂ, ಕಲ್ಯಾಣಿಯ ಚಾಲುಕ್ಯರೂ ಆಳಿದರು. ಕದಂಬರ ಆಡಳಿತವು ಗೋವಾದ ಸಂಸ್ಕೃತಿಯ ಮೇಲೆ ಅಗಾಧ ಪ್ರಭಾವವನ್ನು ಬೀರಿದೆ. ಐವತ್ತು ವರ್ಷಗಳ ಕಾಲ ದೆಹಲಿ ಸುಲ್ತಾನರ ವಶದಲ್ಲಿದ್ದ ಗೋವಾವನ್ನು ಮೊಗಲರು ವಿಜಯನಗರದ ಅರಸರಿಗೆ ಒಪ್ಪಿಸಬೇಕಾಗಿ ಬಂತು. ಅನಂತರ ಕೆಲಕಾಲ ಗುಲಬರ್ಗಾದ ಬಹಮನಿ ಸುಲ್ತಾನರು ಮತ್ತು ಬಿಜಾಪುರದ ಆದಿಲ್‌ಷಾಹಿಗಳ ಆಡಳಿತದಲ್ಲಿದ್ದ ಗೋವಾ, ಆದಿಲ್‌ಷಾಹಿಗಳ ಕಾಲದಲ್ಲಿ ಅವರ ರಾಜಧಾನಿಯಾಯಿತು.

೧೪೯೮ ರಲ್ಲಿ ಸಮುದ್ರಮಾರ್ಗವಾಗಿ ಬಂದು, ಭಾರತದಲ್ಲಿ




ಸುಬ್ರಾಯ ನಾಯಕ್, ಸಂನ್ಯಾಸದ ನಂತರ ಸ್ವಾಮಿ ಸುಬ್ರಹ್ಮಣ್ಯಾನಂದ

ಕಾಲಿಟ್ಟ ಮೊದಲ ಯುರೋಪೀಯನೆಂದರೆ ವಾಸ್ಕೊ ಡ ಗಾಮ ಎಂಬುವವನು. ಮೊದಲಿಗೆ ಕೇರಳದ ಕಲ್ಲಿಕೋಟೆಗೆ ಬಂದ ಅವನು ಅನಂತರ, ಆಗ 'ಹಳೆಯ ಗೋವಾ' ಎಂದು ಕರೆಯಲಾಗುತ್ತಿದ್ದ ಇಂದಿನ ಗೋವಾ ನಗರಕ್ಕೆ ಬಂದು ವ್ಯಾಪಾರ ಪ್ರಾರಂಭಿಸಿದ. ಅಂದಿನಿಂದ, ಮಾಂಡೋವಿ ನದಿಯ ದಡದ ಮೇಲಿನ ಗೋವಾ ನಗರ ಭಾರತದ ಪಶ್ಚಿಮ ಕರಾವಳಿ ಪ್ರದೇಶದ ಅತ್ಯಂತ ದೊಡ್ಡ ವ್ಯಾಪಾರ ಕೇಂದ್ರವಾಗಿ ಬೆಳೆಯಿತು. ಕೆಲ ಕಾಲಾನಂತರ, ತಿಮ್ಮಯ್ಯನೆಂಬ ಸ್ಥಳೀಯನ ನೆರವಿನಿಂದ ಬಿಜಾಪುರದ ದೊರೆಗಳನ್ನು ಪರಾಭವಗೊಳಿಸಿದ ಪೋರ್ಚುಗೀಸ್ ನೌಕಾಧಿಪತಿಯಾದ ಅಲ್ಫಾನ್ಸೊ ಡಿ ಆಲ್ಬುಕರ್ಕ್, ಗೋವಾದಲ್ಲಿ ಕಾಯಂ ಪೋರ್ಚುಗಲ್ ವಸಾಹತುವೊಂದನ್ನು ಸ್ಥಾಪಿಸಿದ. ಗೋವಾದಲ್ಲಿ ಕ್ರೈಸ್ತ ಮಿಷನರಿಗಳು ಬಲವಂತದ ಮತಾಂತರಗಳನ್ನು ನಡೆಸ ತೊಡಗಿದರು. ಅವರ ಕಿರುಕುಳಕ್ಕೆ ಹೆದರಿದ ಅನೇಕ ಹಿಂದೂಗಳು, ನೆರೆಹೊರೆಯ ಮಂಗಳೂರು, ಕಾರವಾರ ಮತ್ತು ಮಹಾರಾಷ್ಟ್ರದ ಸಾವಂತವಾಡಿಗಳಿಗೆ ಓಡಿಹೋದರು.

ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ, ಗೋವಾದ ಮೇಲಿನ ಆಡಳಿತ ನಿಯಂತ್ರಣವನ್ನು ತ್ಯಜಿಸಲು ಪೋರ್ಚುಗೀಸರು ಒಪ್ಪಲಿಲ್ಲ. ಡಿಸೆಂಬರ್ ೧೯೬೧ ರಲ್ಲಿ ನಡೆದ 'ಆಪರೇಷನ್ ವಿಜಯ' ದಲ್ಲಿ ಅಂತಿಮವಾಗಿ ಭಾರತವು ಗೋವಾದ ಮೇಲೆ ಪ್ರಭುತ್ವ ಸಾಧಿಸಿತು. ಗೋವಾ, ಡಮನ್ ಮತ್ತು ಡಯುಗಳು ಭಾರತದ ಕೇಂದ್ರಾಡಳಿತಕ್ಕೆ ಒಳಪಟ್ಟವು. ೧೯೮೭ ರಲ್ಲಿ ಗೋವಾಕ್ಕೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ಗಳನ್ನು ನೀಡಲಾಯಿತು.

ಜುವಾರಿ ಮತ್ತು ಮಾಂಡೋವಿ – ಇವು ಗೋವಾದ ಮುಖ್ಯ ನದಿಗಳಾಗಿವೆ. ಜುವಾರಿಯ ಮುಖಪ್ರದೇಶದಲ್ಲಿರುವ ಮರ್ಮ ಗೋವಾ ದಕ್ಷಿಣ ಏಷ್ಯಾದ ಅತ್ಯುತ್ತಮ ನೈಸರ್ಗಿಕ ಬಂದರುಗಳಲ್ಲಿ ಒಂದಾಗಿದೆ. ಕದಂಬರ ಆಡಳಿತ ಕಾಲದಲ್ಲಿ ನಿರ್ಮಾಣವಾದ ಮುನ್ನೂರಕ್ಕಿಂತಲೂ ಹೆಚ್ಚು ಪುರಾತನ ಕೆರೆಗಳು ಗೋವಾದಲ್ಲಿವೆ. ವಿವಿಧ ಜೀವಜಾತಿಗಳು ಮತ್ತು ಸಸ್ಯವರ್ಗಗಳಿಂದ ಸಮೃದ್ಧವಾಗಿರುವ ಗೋವಾದ ರಾಜಧಾನಿ ಪಣಜಿ (ಪಂಜಿಮ್), ಗೋವಾದ ಅತ್ಯಂತ ದೊಡ್ಡ ನಗರ. ವಿಶ್ವವಿಖ್ಯಾತಿ ಪಡೆದ ಗೋವಾದ ಬೀಚ್‌ಗಳಿಗೆ ಪ್ರತಿವರ್ಷ ಸಾವಿರಾರು ಭಾರತೀಯರು ಮತ್ತು ವಿದೇಶೀ ಪ್ರವಾಸಿಗಳು ಬರುತ್ತಾರೆ. ಭಾರತದ ಅತಿ ಶ್ರೀಮಂತ ರಾಜ್ಯವಾಗಿರುವ ಗೋವಾದ ಆದಾಯದ ಮೂಲವೇ ಪ್ರವಾಸೋದ್ಯಮ. ಅನೇಕ ಆಕರ್ಷಕ ಪಾರಂಪರಿಕ ಶೈಲಿಯ ದೇವಸ್ಥಾನಗಳೂ, ಚರ್ಚ್‌ಗಳೂ ಗೋವಾ ದಲ್ಲಿವೆ. ಹಿಂದೂಮತ, ಕ್ರೈಸ್ತಮತ ಮತ್ತು ಇಸ್ಲಾಂಗಳು ಗೋವಾದ ಮುಖ್ಯ ಧರ್ಮಗಳಾಗಿವೆ. ಗೋವಾದ ದೇವಾಲಯಗಳು ತಮ್ಮ ಸಹಜ ಸೌಂದರ್ಯಕ್ಕೆ ಹೆಸರಾಗಿವೆ. ಇವು ಗೋವಾದ ಜನರ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಸಾರುತ್ತವೆ. ಕೊಂಕಣಿ, ಮರಾಠಿ – ಗೋವಾದ ಎರಡು ಮುಖ್ಯ ಭಾಷೆಗಳು; ಗಣೇಶ ಚತುರ್ಥಿ, ಕ್ರಿಸ್‌ಮಸ್ ಇಲ್ಲಿನ ಎರಡು ಪ್ರಮುಖ ಹಬ್ಬಗಳು.

## ಗೋವಾದಲ್ಲಿ ಸ್ವಾಮಿ ವಿವೇಕಾನಂದರು

ಗೋವಾದಲ್ಲಿ ತಂಗಿದ್ದ ಕಾಲದಲ್ಲಿ ಸ್ವಾಮಿ ವಿವೇಕಾನಂದರು ಅನೇಕ ಸ್ಥಳಗಳಿಗೆ ಭೇಟಿ ನೀಡಿದ್ದರು. ಶ್ರೀ ವಿ. ಎಸ್. ಸುಖ್ಟಂಕರ್ ಅವರ ಒಂದು ಲೇಖನದಲ್ಲಿ ಸ್ವಾಮೀಜಿ ಅವರ ಗೋವಾ ಪ್ರವಾಸದ ಈ ಕೆಳಗಿನ ಮುಖ್ಯ ವಿವರಗಳು ತಿಳಿದುಬರುತ್ತವೆ.

೧. ಮರ್ಮಗೋವಾ ರೈಲು ನಿಲ್ದಾಣದಲ್ಲಿ ಸ್ವಾಮಿ ವಿವೇಕಾ ನಂದರನ್ನು ಸಾವಿರಾರು ಜನರು ಸ್ವಾಗತಿಸಿದರು. ಅಮೆರಿಕಕ್ಕೆ ತೆರಳುವ ಮೊದಲು ಭಾರತದ ಇನ್ನು ಯಾವುದೇ ಸ್ಥಳದಲ್ಲಿಯೂ ಅವರಿಗೆ ಅಂತಹ ಭಾರೀ ಸ್ವಾಗತ ದೊರಕಿದ್ದು ದಾಖಲೆಯಾಗಿಲ್ಲ.

೨. ಗೋವಾದ ರಾಚೋಲ್‌ನಲ್ಲಿ ಅವರು ಮೂರು ದಿನಗಳ ಕಾಲ ಕ್ರೈಸ್ತ ದೇವತಾಶಾಸ್ತ್ರದ ಅಧ್ಯಯನ ಮಾಡಿದರು.

೩. ಸ್ವಾಮೀಜಿಯಿಂದ ತುಂಬ ಪ್ರಭಾವಿತರಾಗಿದ್ದ ಸುಬ್ರಾಯ ನಾಯಕ್ ಎಂಬವವರು ಗೋವಾದಲ್ಲಿ ತಂಗಲು ಎಲ್ಲ ವ್ಯವಸ್ಥೆ ಯನ್ನೂ ಮಾಡಿದ್ದರು.

ಗೋವಾದಲ್ಲಿ ಸ್ವಾಮೀಜಿ ಈ ಕೆಳಕಾಣಿಸಲಾದ ಸ್ಥಳಗಳಿಗೆ ಭೇಟಿ ನೀಡಿದ್ದರು:

**೧. ಸುಬ್ರಾಯ ನಾಯಕ್ ಅವರ ಮನೆ:** ಸ್ವಾಮೀಜಿ ತಂಗಿದ್ದ ಸಂಸ್ಕೃತ ವಿದ್ವಾಂಸ ಸುಬ್ರಾಯ ನಾಯಕರ ದೊಡ್ಡ ಮನೆ ಗೋವಾದ ವಾಸ್ತು ಶೈಲಿಯಲ್ಲಿ ನಿರ್ಮಾಣವಾಗಿತ್ತು. ಮರ್ಮಗೋವಾದ ಪುಣ್ಯಕ್ಷೇತ್ರ ದಾಮೋದರ್ ಸಾಲ್‌ನ ಸಮೀಪ ಇತ್ತು. ಗೋವಾದಲ್ಲಿ ದಾಮೋದರ ಎಂದರೆ ಈಶ್ವರ. ಆ ಮನೆಯ ಪ್ರವೇಶದ್ವಾರದ ಬಲಬದಿಯಲ್ಲಿರುವ ಕೊಠಡಿಯಲ್ಲಿ ಸ್ವಾಮೀಜಿ ತಂಗಿದ್ದರು. ೧೮೫೫ ರಲ್ಲಿ ಜನಿಸಿದ ನಾಯಕ್ ಸಾರಸ್ವತ ಬ್ರಾಹ್ಮಣ ಕುಟುಂಬಕ್ಕೆ ಸೇರಿ ದವರಾಗಿದ್ದರು. ಪೋರ್ಚುಗೀಸ್, ಲ್ಯಾಟಿನ್, ಫ್ರೆಂಚ್ ಮತ್ತು ಸಂಸ್ಕೃತ ಭಾಷೆಗಳನ್ನೂ, ನ್ಯಾಯ, ವೇದಾಂತ, ಮೀಮಾಂಸೆ, ಆಯುರ್ವೇದ ಹಾಗೂ ಜ್ಯೋತಿಷ್ಯ ಶಾಸ್ತ್ರಗಳನ್ನೂ ಅಧ್ಯಯನ ಮಾಡಿದ್ದರು. ಬಡಜನರಿಗೆ ಉಚಿತ ವೈದ್ಯಕೀಯ ನೆರವು ನೀಡು ತ್ತಿದ್ದರು. ಗೋವಾದಲ್ಲಿ ಮರಾಠಿ ಶಾಲೆಯೊಂದನ್ನು ಸ್ಥಾಪಿಸಿದ್ದ ಅವರು, 'ಗೋವಾತ್ಮಾ' ಎಂಬ ಮರಾಠಿ ಮಾಸಪತ್ರಿಕೆಯನ್ನು ಪ್ರಾರಂಭಿಸಿದ್ದರು. ಇದು ಆಧುನಿಕ ಮರಾಠಿ ಪತ್ರಿಕೋದ್ಯಮ ಇತಿಹಾಸದ ಪ್ರಥಮ ಮೈಲುಗಲ್ಲಾಗಿದೆ. ಸಾರ್ವಜನಿಕ

ಗ್ರಂಥಾಲಯವೊಂದನ್ನು ತೆರೆದ ನಾಯಕ್ ಅನೇಕ ಲೇಖನಗಳನ್ನೂ ನಾಟಕಗಳನ್ನೂ ಬರೆದುದಲ್ಲದೆ ನಾಟಕಗಳಲ್ಲಿ ಕೂಡ ಅಭಿನಯಿಸಿದ್ದರು. ಆಚಾರ್ಯತ್ರಯರ ವೇದಾಂತ ವಿಚಾರಗಳನ್ನು ನಿರೂಪಿಸುವ **'ತ್ರಿಮತ ಉಪನ್ಯಾಸ'** ಎಂಬುದು ನಾಯಕ್ ಅವರ ಮುಖ್ಯ ಗ್ರಂಥ.

ಸ್ವಾಮೀಜಿ ಮತ್ತು ನಾಯಕ್ ಇಬ್ಬರೂ ಬಹು ಮಟ್ಟಿಗೆ ಸಂಸ್ಕೃತದಲ್ಲಿಯೇ ಮಾತುಕಥೆ ನಡೆಸುತ್ತಿದ್ದರು. ಅವರನ್ನು ನೋಡಲು ಪ್ರತಿನಿತ್ಯ ಜನರು ಗುಂಪುಗುಂಪಾಗಿ ಬರುತ್ತಿದ್ದರು. ಅವರಲ್ಲಿ ಕ್ಯಾಥೋಲಿಕ್ ಪಾದ್ರಿಗಳೂ ಸೇರಿದ್ದರು. ಸ್ವಾಮೀಜಿ ಗೋವಾದಿಂದ ಹೊರಡುವ ಮುನ್ನ ತೆಗೆದ ಅವರ ಫೋಟೊ ಈಗಲೂ ಆ ಮನೆಯಲ್ಲಿದೆ.


ರಾಚೋಲ್ ಶಿಕ್ಷಣಸಂಸ್ಥೆ

ಅನೇಕ ವರ್ಷಗಳ ತರುವಾಯ, ೧೯೧೦ ರಲ್ಲಿ, ಸುಬ್ರಾಯ್ ನಾಯಕ್ ಅವರು ಸಂನ್ಯಾಸ ದೀಕ್ಷೆ ಪಡೆದು, 'ಸ್ವಾಮಿ ಸುಬ್ರಹ್ಮಣ್ಯಾನಂದ ತೀರ್ಥ'ರಾದರು. ಅನೇಕ ಸ್ಥಳಗಳಲ್ಲಿ ಧಾರ್ಮಿಕ ಉಪನ್ಯಾಸಗಳನ್ನು ನೀಡಿದ ಅವರು ೧೯೧೫ ರಲ್ಲಿ ಗೋವಾದಲ್ಲಿ ನಡೆದ ವಿವೇಕಾನಂದರ ೫೪ನೇ ಜನ್ಮದಿನೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ೧೯೧೬ ರಲ್ಲಿ ನಿಧನರಾಗುವವರೆಗೆ ಅವರು ವಿವೇಕಾನಂದರು ತಂಗಿದ್ದ ಕೊಠಡಿಯಲ್ಲಿಯೇ ಇದ್ದರು. ಇತ್ತೀಚೆಗೆ ನವೀಕರಣಗೊಂಡ ಆ ಕೊಠಡಿ, ೨೦೦೬ ರಲ್ಲಿ ಗ್ರಂಥಾಲಯವಾಗಿ ಅನೇಕ ವಿದ್ವಾಂಸರ ಆಕರ್ಷಣೆಯ ಕೇಂದ್ರವಾಗಿದೆ.

**೨. ರಾಚೋಲ್ ಶಿಕ್ಷಣ ಸಂಸ್ಥೆ:** ಗೋವಾದಿಂದ ೪ ಕಿ.ಮೀ. ದೂರ ಇರುವ ರಾಚೋಲ್ ಎಂಬ ಹಳ್ಳಿಯಲ್ಲಿ ೧೬೦೬ ರಲ್ಲಿ ಚರ್ಚ್ ನಿರ್ಮಾಣ ಪ್ರಾರಂಭವಾಯಿತು. ೧೫೦ ವರ್ಷಗಳ ದೀರ್ಘಾವಧಿಯಲ್ಲಿ ರಾಚೋಲ್ ಶಿಕ್ಷಣ ಸಂಸ್ಥೆ (Seminary) ಭಾರೀ ಪ್ರಗತಿಯನ್ನು ಸಾಧಿಸಿದೆ. ಸ್ವಾಮೀಜಿ ಮೂರು ದಿನಗಳ ಕಾಲ ಇಲ್ಲಿ ತಂಗಿದ್ದು ಕ್ರೈಸ್ತ ದೇವತಾಶಾಸ್ತ್ರದ ಅಧ್ಯಯನ ಮಾಡಿದ್ದರು. ಅಲ್ಲಿನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದರು. ಸ್ವಾಮೀಜಿಯವರ ಕೆಲವು ಅಭಿಮಾನಿಗಳ ಪ್ರಯತ್ನದ ಫಲವಾಗಿ ಕೆಲಕಾಲದ ಹಿಂದೆ ಒಂದು ಸುಸಜ್ಜಿತ ಗ್ರಂಥಾಲಯ ಅಲ್ಲಿ ಪ್ರಾರಂಭವಾಗಿದೆ.

**೩. ದೇವಾಲಯಗಳ ಸಂದರ್ಶನ:** ಗೋವಾದ ಅನೇಕ ದೇವಾಲಯಗಳಿಗೆ ವಿವೇಕಾನಂದರು ಭೇಟಿ ನೀಡಿದ್ದರು. ಸ್ವಾಮೀಜಿಯವರು ಕವಲದಲ್ಲಿರುವ ಶಾಂತಾದುರ್ಗಾ ದೇವಾಲಯಕ್ಕೆ ಹೋಗಿ ಕಾಳೀ ಮಾತೆಯನ್ನು ಪೂಜಿಸಿದ್ದರು. ಮರ್ಡೋಲದ ಮಹಾಲಸಾ ದೇವಾಲಯಕ್ಕೆ ಭೇಟಿ ನೀಡಿ, ಒಂದು ಹಿಂದೂಸ್ಥಾನಿ ಸಂಗೀತ ಪದ್ಧತಿಯ ಖಯಾಲ್ ಅನ್ನು ಹಾಡಿದ್ದರು. ಮಂಗೇಶಿ ದೇವಾಲಯ ಮತ್ತು ಮರ್ಮಗೋವಾದ ಸುಬ್ರಾಯ್ ಬಾಬಾ ಸಭಾಂಗಣಗಳನ್ನು ಸಂದರ್ಶಿಸಿದ್ದರು.

**೪. ವೆಂಗುರ್ಲ ಗ್ರಂಥಾಲಯದಲ್ಲಿ ಉಪನ್ಯಾಸ:** ವೆಂಗುರ್ಲವು ಗೋವಾದ ಕರಾವಳಿಯಲ್ಲಿರುವ ಪ್ರಮುಖ ನಗರವಾಗಿದ್ದು ಅಲ್ಲಿ ೨೪೦ ಅಡಿ ಎತ್ತರದ ದೀಪಸ್ತಂಭವಿದೆ. ಇದು ಪ್ರವಾಸಿಗಳನ್ನು ಆಕರ್ಷಿಸುವ ತಾಣವಾಗಿದೆ. ವೆಂಗುರ್ಲ ನಗರ ವಾಚನಾಲಯದಲ್ಲಿ ಲಭ್ಯವಿರುವ ದಾಖಲೆಯೊಂದರ ಪ್ರಕಾರ, ಸ್ವಾಮಿ ವಿವೇಕಾನಂದರು ಇಲ್ಲಿಗೆ ಬಂದಾಗ ಗ್ರಂಥಾಲಯದ ಸಭಾಂಗಣದಲ್ಲಿ **'ಸಂಚಿತ, ಪ್ರಾರಬ್ಧ ಹಾಗೂ ಆಗಾಮಿ ಕರ್ಮ'** ಗಳನ್ನು ಕುರಿತಂತೆ ಉಪನ್ಯಾಸ ಮಾಡಿದ್ದರೆಂದು ಉಲ್ಲೇಖಿಸಲಾಗಿದೆ.

**೫. ಗಾಯನ ಅಧಿವೇಶನಗಳು:** ತಮ್ಮ 'ಯತಿ ಸುಬ್ರಹ್ಮಣ್ಯಾನಂದ' ಎಂಬ ಕೃತಿಯಲ್ಲಿ ದಲಾಲ್ ಅವರು ಸ್ವಾಮೀಜಿ ಮತ್ತು ಸುಬ್ರಾಯ ನಾಯಕರ ಸ್ನೇಹದ ಬಗ್ಗೆ ಕೆಲವು ಸ್ವಾರಸ್ಯಕರ ದಾಖಲೆಗಳನ್ನು ನೀಡಿದ್ದಾರೆ. ನಾಯಕರ ಮನೆಯಲ್ಲಿ ಸ್ವಾಮೀಜಿ ಅನೇಕ ಸಲ ಹಾಡಿದ್ದರಂತೆ, ಅವರ ಗಾಯನಕ್ಕೆ ಆ ದಿನಗಳಲ್ಲಿ ಖ್ಯಾತರಾಗಿದ್ದ ಖಿರುಪ್‌ಜೀ ಎಂಬುವವರು ತಬಲಾ ನುಡಿಸಿದ್ದರಂತೆ.

ಮರ್ಮಗೋವಾದಿಂದ ರೈಲಿನಲ್ಲಿ ವಿವೇಕಾನಂದರು ಧಾರವಾಡಕ್ಕೆ, ಅನಂತರ ಅಲ್ಲಿಂದ ಬೆಂಗಳೂರಿಗೆ ಪಯಣಿಸಿದರು. ಅವರ ಗೋವಾ ಪ್ರವಾಸ ಅಲ್ಪಾವಧಿಯದ್ದಾಗಿದ್ದರೂ, ಅಲ್ಲಿ ಅವರನ್ನು ಭೇಟಿ ಮಾಡಿದ ಅನೇಕರು ಅವರ ಪ್ರಭಾವಕ್ಕೆ ಒಳಗಾಗಿದ್ದರು. ಗೋವಾದ ಶ್ರೀರಾಮಕೃಷ್ಣ ಆಶ್ರಮವು ೧೨ ವರ್ಷಗಳಿಂದ ವಿವೇಕಾನಂದರ ಬೋಧನೆಗಳ ಪ್ರಚಾರದಲ್ಲಿ ತೊಡಗಿದೆ. ೧೯೯೬ರಲ್ಲಿ ಮರ್ಮಗೋವಾದ ವಿದ್ಯಾನಗರದಲ್ಲಿ ರಾಮಕೃಷ್ಣ ಸೇವಾ ಸಮಿತಿಯನ್ನು ಸ್ಥಾಪಿಸಲಾಗಿದೆ. ಇದನ್ನು ಉದ್ಘಾಟಿಸಿದವರು ಪರಮಪೂಜ್ಯ ಸ್ವಾಮಿ ಗಹನಾನಂದಜಿ ಅವರು. ಈ ಸಮಿತಿಯ ಆಶ್ರಯದಲ್ಲಿ ಪ್ರಾರ್ಥನಾ ಸಭೆಗಳನ್ನೂ, ಕಾಲಕಾಲಕ್ಕೆ ಉಪನ್ಯಾಸಗಳನ್ನೂ ನಡೆಸಲಾಗುತ್ತಿದೆ. ಸ್ವಾಮಿ ವಿವೇಕಾನಂದರ ಪ್ರಭಾವಕ್ಕೆ ಒಳಗಾದವರು ಬದುಕಿನಲ್ಲಿ ಹೊಸ ಶಕ್ತಿಯನ್ನೂ ಸ್ಫೂರ್ತಿಯನ್ನೂ ಪಡೆಯುತ್ತಾರೆ. ಅವರ ಬೋಧನೆಗಳಿಂದ ಜನರ ಜೀವನಕ್ಕೆ ಹೊಸ ಅರ್ಥ ಬರುತ್ತದೆ. **"ನಾನು ಮರಣ ಹೊಂದಿದ ಮೇಲೆಯೂ ನನ್ನ ಕಾರ್ಯ ಚಟುವಟಿಕೆಗಳು ಕೊನೆಗೊಳ್ಳುವುದಿಲ್ಲ"** ಎಂಬ ಸ್ವಾಮೀಜಿಯವರ ನುಡಿ ಈಗಲೂ ಕೂಡ ಭಾರತೀಯರಿಗೆ ಸ್ಫೂರ್ತಿಯ ಚಿಲುಮೆಯಾಗಿರುತ್ತದೆ.